ಪ್ರಿಯಕರ: ನಾನು ನಿನ್ನನ್ನು ಮದುವೆಯಾಗಲಾರೆ ನಮ್ಮ ಮನೆಯವರು ಅದಕ್ಕೆ ಒಪ್ಪುತ್ತಿಲ್ಲ.

ಪ್ರೇಯಸಿ: ಯಾರ್‍ಯಾರಿದ್ದಾರೆ ನಿಮ್ಮ ಮನೆಯಲ್ಲಿ?

ಪ್ರಿಯಕರ: ಒಬ್ಬ ಹೆಂಡತಿ, ಇಬ್ಬರು ಮಕ್ಕಳು.

***

ಮದುವೆಯಾದ ಒಂದು ವಾರದಲ್ಲೇ ಪತಿ ಪತ್ನಿಯನ್ನು ಥಳಿಸತೊಡಗಿದ. ನೆರಹೊರೆಯವರೆಲ್ಲ ಸೇರಿ 'ಪಾಪ ಅವಳನ್ನೇಕೆ ಥಳಿಸುತ್ತಿರುವೆ. ಏನು ತಪ್ಪು ಮಾಡಿದ್ದಾಳೆ' ಎಂದು ಕೇಳಿದರು.

ಅವಳು ನನ್ನ ಚಹಾ ಕಪ್ಪಿನಲ್ಲಿ ತಾಯಿತ ಹಾಕಿ ನನ್ನನ್ನು ವಶೀಕರಣ ಮಾಡಲು ಯತ್ನಿಸುತ್ತಿದ್ದಾಳೆ ಎಂದನಾತ.

ಆಗ ಪತ್ನಿ ಅಳುತ್ತ ಹೇಳಿದಳು: 'ಅದು ತಾಯಿತವಲ್ಲ ಟೀ ಬ್ಯಾಗ್'

***

ಗರ್ಲ್ ಫ್ರೆಂಡ್: ಈ ಬಾರಿ ನಾನು ಫೇಲ್ ಆದರೆ ನನ್ನ ಮದುವೆಯನ್ನು ಒಬ್ಬ ಆಟೋ ರಿಕ್ಷಾ ಹೊಡೆಯುವವನೊಂದಿಗೆ ಮಾಡಿಬಿಡುವುದಾಗಿ ನನ್ನ ತಂದೆ ಹೇಳಿದ್ದಾರೆ.

ಬಾಯ್ ಫ್ರೆಂಡ್: ಒಳ್ಳೆಯದೇ ಆಯಿತು ಏಕೆಂದರೆ ನಾನು ಫೇಲ್ ಆದರೆ ನನಗೊಂದು ಆಟೋ ರಿಕ್ಷಾ ಕೊಡಿಸುವುದಾಗಿ ನನ್ನ ಡ್ಯಾಡಿ ಹೇಳಿದ್ದಾರೆ.

***

ಒಬ್ಬ ಪತ್ನಿಯ ಸ್ವಗತ: ನನ್ನ ಗಂಡ ತುಂಬ ಸುಳ್ಳುಗಾರ ನನ್ನ ಐದು ಸಾವಿರ ಕಳೆದುಹೊಗಿದೆ ಎಂದು ಮುಂಜಾನೆಯಿಂದ ಕೂಗಾಡುತ್ತಿದ್ದಾನೆ. ನಾನು ಮೂರು ಬಾರಿ ಬಾತ್‌ರೂಮಿಗೆ ಹೋಗಿ ಎಣಿಸಿ ಬಂದಿದ್ದೇನೆ, ನಾಲ್ಕು ಸಾವಿರ ಮಾತ್ರ ಇದೆ.

***

ತನ್ನ ಸೊಸೆಗೆ ಎರಡನೆಯ ಮಗು ಕೂಡ ಹೆಣ್ಣಾದುದಕ್ಕೆ ಅತ್ತೆ ಸಂಕಟ ಪಡುತ್ತಿದ್ದಳು. ಅದನ್ನು ಕಂಡ ನೆರೆಮನೆಯ ಅಜ್ಜಿ 'ಕಮಲಮ್ಮ, ಮಗು ಹೆಣ್ಣಾದರೇನು, ಗಂಡಾದರೇನು? ಏನು ವ್ಯತ್ಯಾಸವಾಗುತ್ತದೆ?' ಎಂದಳು.

ಆಗ ಕಮಲಮ್ಮ ಒಂದು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು 'ಹಾಗಲ್ಲ ಅಜ್ಜಿ, ಹೆಣ್ಣು ಮಗು ಮನೆಗೆ ಲಕ್ಷ್ಮಿ ಎಂದು ನನಗೂ ಗೊತ್ತು. ಆದರೆ ನನ್ನ ಸೊಸೆಗೆ ಸೊಸೆ ಬಾರದಿದ್ದರೆ ಅತ್ತೆಯಾದವಳ ಕಷ್ಟ ಏನು ಎಂದು ಅವಳಿಗೆ ತಿಳಿಯುವದಾದರೂ ಹೇಗೆ?' ಎಂದು ಕೇಳಿದಳು.

***

ಗುಂಡನಿಗೆ ಪ್ರಾಣಿ ಸಂಗ್ರಹಾಲಯದಲ್ಲಿ ಕೆಲಸ ದೊರೆಯಿತು. ಒಂದು ರಾತ್ರಿ ಅವನು ಹುಲಿಯ ಬೋನಿಗೆ ಬೀಗ ಹಾಕುವುದನ್ನು ಮರೆತು ಬಿಟ್ಟ. ಮುಂಜಾನೆ ಅದನ್ನು ಕಂಡ ಪ್ರಾಣಿ ಸಂಗ್ರಹಾಲಯದ ಅಧಿಕಾರಿ 'ನೀನು ಕಳೆದ ರಾತ್ರಿ ಹುಲಿಯ ಬೋನಿಗೆ ಏಕೆ ಬೀಗ ಹಾಕಲಿಲ್ಲ?' ಎಂದು ಕೇಳಿದ.

'ಹುಲಿಯಂತಹ ಕ್ರೂರ ಪ್ರಾಣಿಯನ್ನು ಯಾರು ತಾನೆ ಕದಿಯುತ್ತಾರೆ ಸಾರ್?' ಎಂದು ಗುಂಡ ಅಧಿಕಾರಿಯನ್ನೇ ಪ್ರಶ್ನಿಸಿದ.

***

ತಿಮ್ಮನಕುತ್ತಿಗೆಯಲ್ಲಿನೋವುಉಂಟಾಯಿತುವೈದ್ಯರು ಚೀಟಿಯನ್ನು ಬರೆದುಕೊಟ್ಟರು. ಔಷಧ ಕೊಳ್ಳಲು ತಿಮ್ಮ ಮೆಡಿಕಲ್ ಶಾಪಿಗೆ ಹೋದ. ಚೀಟಿಯನ್ನು ನೋಡಿದ ಮೆಡಿಕಲ್ ಶಾಪಿನವ ದಂಗಾದ ಉದ್ದನೆಯ ವೈರ್ ಇರುವ ಚಾರ್ಜರ್ ಖರೀದಿಸು ಎಂದು ಅದರಲ್ಲಿ ಬರೆದಿತ್ತು.




***

ಒಬ್ಬ ಕಿರಾಣಿ ಅಂಗಡಿಯವನು ತನ್ನ ಗಿರಾಕಿಯ ಮದುವೆಗೆ ಹೋದ. ಊಟದ ನಂತರ ವರನ ಕೈಗೆ ಒಂದು ಕವರನ್ನು ಕೊಟ್ಟು ಹೋದ. ಮರುದಿನ ಮದುವೆಯ ಗಂಡು ತನಗೆ ಉಡುಗೊರೆಯಾಗಿ ಬಂದ ಎಲ್ಲ ಕವರುಗಳನ್ನು ಬಿಚ್ಚಿ ನೋಡಿದಾಗ ಎಲ್ಲ ಕವರುಗಳಲ್ಲಿ ಹಣವಿತ್ತು. ಆದರೆ ಒಂದು ಕವರಿನಲ್ಲಿ ಹಣವಿರಲಿಲ್ಲ. ಒಂದು ಲೆಕ್ಕದ ಚೀಟಿಯಿತ್ತು. ಅದರಲ್ಲಿ ಹಿಂದಿನ ಬಾಕಿ 1850 ರೂಪಾಯಿ, ಲಗ್ನದ ಕಾಣಿಕೆ 500 ರೂಪಾಯಿ, ಜಮಾ ಉಳಿದ ಬಾಕಿ 1350 ರೂಪಾಯಿ ಆದಷ್ಟು ಬೇಗ ತೀರಿಸು ಎಂದು ಬರೆದಿತ್ತು.

***

ಕ್ಲಾಸ್ ಟೀಚರ್ ವಿದ್ಯಾರ್ಥಿಗಳಿಗೆ ಕೇಳಿದರು. ಕಲ್ಲು ಮುಳ್ಳು ತುಂಬಿದ ಜೀವನದ ರಸ್ತೆಯಲ್ಲಿ ಸಾಗುವಾಗ ನಿಮ್ಮ ಸಹಾಯಕ್ಕೆ ಬರುವವರು ತಂದೆ–ತಾಯಿಯೋ, ಬಂಧುಗಳೋ ಅಥವಾ ಗೆಳೆಯರೋ?

ಆಗ ತಿಪ್ಪೇಶಿ ಎದ್ದುನಿಂತು ಹೇಳಿದ ಇವರ್‍ಯಾರು ಅಲ್ಲ ಪಾದರಕ್ಷೆಗಳು.

***

ತಿಪ್ಪೇಶಿ: ವಕೀಲರ ಬಳಿ ಹೋಗಿ 'ಸರ್ ನನ್ನ ವಿಲ್ ಬರೆಬೇಕಾಗಿದೆ, ನನ್ನ ಮರಣದ ನಂತರ ನನ್ನ ಬಳಿ ಇರುವುದೆಲ್ಲವನ್ನು ಅನಾಥಾಶ್ರಮದ ಹೆಸರಿಗೆ ಬರೆಯಬೇಕೆಂದಿದ್ದೇನೆ. ಎಂದು ಹೇಳಿದ.

ನಿನ್ನ ಬಳಿ ಏನೇನು ಆಸ್ತಿ ಇದೆ? ವಕೀಲ ಕೇಳಿದ.

ಒಬ್ಬ ಮಗ ಹಾಗೂ ಒಬ್ಬಳು ಮಗಳು. ತಿಪ್ಪೇಶಿ ನುಡಿದ.

(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ

